## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 603/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಂದರ |
| ತಂದೆಯ ಹೆಸರು | : | ಬಸವಯ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಾಳೀಹುಂಡಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 06.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-2 ನನ್ನ ಅಣ್ಣ, ಚಾಸಾ-3 ನನ್ನ ತಾಯಿ ಮತ್ತು ಚಾಸಾ-4 ನನ್ನ ಹೆಂಡತಿ. ಚಾಸಾ-5 ರಿಂದ ಚಾಸಾ-8 ರವರ ಪರಿಚಯವಿರುತ್ತದೆ. ಅವರು ನಮ್ಮ ಗ್ರಾಮದವರು. ಚಾಸಾ-9 ರವರು ನಮ್ಮ ಪಕ್ಕದ ಬೀದಿಯವರು. ಚಾಸಾ-10 ನನ್ನ ಅಕ್ಕನ ಮಗ.

ದಿನಾಂಕಃ 08.05.2020 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಮನೆಯಲ್ಲಿ ಮಲಗಿರುವಾಗ 1 ನೇ ಆರೋಪಿಯಾದ ಅರುಣ್ ಕುಮಾರ ನಮ್ಮ ಮನೆಯ ಬಳಿ ಬಂದು ಕಿಟಕಿಯ ಹತ್ತಿರ ಇಣುಕುತ್ತಿದ್ದು, ಆಗ ನಾನು ನನ್ನ ಅಣ್ಣನಾದ ಚಾಸಾ-2 ರವರಿಗೆ ಫೋನ್ ಮಾಡಿ ತಿಳಿಸಿರುತ್ತೇನೆ. ಆಗ ನನ್ನ ಅಣ್ಣ ಹಾಗು ಅಮ್ಮನಾದ ಚಾಸಾ-3 ರವರು ಹೊರಗೆ ಬಂದಿದ್ದು, ನಾನು ಸಹ ಹೊರಗೆ ಬಂದಿರುತ್ತೇನೆ. ಆಗ 1 ನೇ ಆರೋಪಿ ಅಲ್ಲಿಯೇ ಇದ್ದಿರುತ್ತಾನೆ. ಆಗ ನಾವು ಆತನನ್ನು

ಇಲ್ಲಿ ಏನು ಮಾಡುತ್ತಿದ್ದಿ ಎಂದು ಕೇಳಿದ್ದು, ಆಗ ಆತ ನಾನು ನೋಡಲು ಬಂದಿರುತ್ತೇನೆಂದು ಗಲಾಟೆ ಮಾಡಿರುತ್ತಾನೆ. ಆಗ ಉಳಿದ ಆರೋಪಿಗಳಾದ 2 ರಿಂದ 8 ನೇ ಆರೋಪಿಗಳು ದೊಣ್ಣೆ, ಮಚ್ಚು ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದಿದ್ದು, 1 ನೇ ಆರೋಪಿಯು ಮಚ್ಚಿನಿಂದ ನನ್ನ ತಲೆಯ ಬಲ ಭಾಗಕ್ಕೆ ಹಲ್ಲೆ ಮಾಡಿರುತ್ತಾನೆ. 3 ನೇ ಆರೋಪಿಯು ದೊಣ್ಣೆಯಿಂದ ನನ್ನ ಎಡಕೈಗೆ ಹಲ್ಲೆ ಮಾಡಿದ್ದು, ಅಲ್ಲದೇ ಅದೇ ದೊಣ್ಣೆಯಿಂದ ನನ್ನ ಅಣ್ಣನಾದ ಚಾಸಾ-2 ರವರ ಮೈ-ಕೈ, ಭುಜ, ಕಾಲು ಹಾಗು ತಲೆಗೆ ಹಲ್ಲೆ ಮಾಡಿರುತ್ತಾನೆ. ಅಲ್ಲದೇ 2 ನೇ ಆರೋಪಿಯು ಜಗಳ ಬಿಡಿಸಲು ಬಂದ ನನ್ನ ಅಣ್ಣನಿಗೆ 1 ನೇ ಆರೋಪಿಯ ಬಳಿ ಇದ್ದ ಮಚ್ಚನ್ನು ತೆಗೆದುಕೊಂಡು ಮೂಗಿನ ಮಧ್ಯ ಭಾಗಕ್ಕೆ ಹಲ್ಲೆ ಮಾಡಿರುತ್ತಾನೆ. ಆಗ ನನ್ನ ತಾಯಿಯಾದ ಚಾಸಾ-3 ಮತ್ತು ನನ್ನ ಹೆಂಡತಿಯಾದ ಚಾಸಾ-4 ರವರು ಬಂದಿದ್ದು, ಅವರಿಗೆ 4 ರಿಂದ 7 ನೇ ಆರೋಪಿಗಳು ಕೈಗಳಿಂದ, ಕಲ್ಲು ಮತ್ತು ದೊಣ್ಣೆಗಳಿಂದ ಹಲ್ಲೆ ಮಾಡಿರುತ್ತಾರೆ. ಆಗ ಚಾಸಾ-7 ಹಾಗು ಚಾಸಾ-8 ರವರು ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರೋಪಿಗಳು ನಮ್ಮನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಹೊರಟು ಹೋಗಿರುತ್ತಾರೆ. ನಂತರ ಚಾಸಾ-7 ಮತ್ತು ಚಾಸಾ-8 ರವರು ನನ್ನನ್ನು, ಚಾಸಾ-2 ಮತ್ತು ಚಾಸಾ-3 ರವರನ್ನು ಹೆಚ್.ಡಿ. ಕೋಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದು ಆ ಪ್ರಕಾರ ನಾವು ಮೈಸೂರಿನ ವಿದ್ಯಾರಣ್ಯ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನಂತರ ಮರುದಿನ ಅಂದರೆ ದಿನಾಂಕಃ 09.05.2020 ರಂದು ಹೆಚ್.ಡಿ. ಕೋಟೆಯ ಲೇಡಿ ಪೋಲೀಸ್ ಬಂದು ನಮ್ಮನ್ನು

ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಮೇಲೆ ಹೇಳಿದಂತೆ ಪೋಲೀಸರಿಗೆ ನೀಡಿದ ಹೇಳಿಕೆ ದೂರು ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸದರಿ ದೂರನ್ನು ಗುರುತಿಸಿದ ಮೇರೆಗೆ ಸದರಿ ಹೇಳಿಕೆ ದೂರನ್ನು **ನಿ.ಪಿ.-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 01 ದೊಣ್ಣೆ ಹಾಗು ಮಚ್ಚನ್ನು ನೋಡಿ ಗುರುತಿಸುತ್ತಾರೆ. ನಂತರ ಪೋಲೀಸರು ನನ್ನನ್ನು ಮತ್ತೆ ವಿಚಾರಣೆ ಮಾಡಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ದೊಣ್ಣೆಯನ್ನು **ಮುದ್ದೆಮಾಲು-1** ಎಂದು ಹಾಗು ಮಚ್ಚನ್ನು **ಮುದ್ದೆಮಾಲು-2** ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಆರೋಪಿಗಳ ಪರ ವಕೀಲರು ವೈಯಕ್ತಿಕ ಸಮಸ್ಯೆ ಇರುವುದಾಗಿ ತಿಳಿಸಿ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**